# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎಂ.ಎಸ್. ಸಿದ್ದೇಶ್ವರರಾವ್, ದ್ವಿತೀಯ ದರ್ಜೆ ಸಹಾಯಕರು, ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ ಇವರು ಲೋಕಾಯುಕ್ತ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸಲು ಪ್ರಕರಣವನ್ನು ಇಲಾಖಾ ವಿಚಾರಣೆಗಾಗಿ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

**ಓದಲಾಗಿದೆ:**

ಕರ್ನಾಟಕ ಲೋಕಾಯುಕ್ತ ಇವರ ಅ.ಸ. ಪತ್ರ ಸಂಖ್ಯೆ Compot/Uplok/BD-1901/ 2014/DRE-1 ದಿನಾಂಕ 25-08-2014.

**ಪ್ರಸ್ತಾವನೆ:-**

ಶ್ರೀ ಕೆ. ಶಾಂತಪ್ಪ, ಪಾರೆಸ್ಟರ್, ಜಲಾನಯನ ಅಭಿವೃದ್ಧಿ ಇಲಾಖೆ, ಹೊನ್ನಾಳಿ, ದಾವಣಗೆರೆ, ಇವರು ತಮ್ಮ ವಾರ್ಷಿಕ ವೇತನ ಬಡ್ತಿಗೆ ಸಂಬಂಧಿಸಿದ ಬಿಲ್ಲನ್ನು ಸಿದ್ಧಪಡಿಸಿಕೊಡುವಂತೆ ಹಾಗೂ ತಡೆಹಿಡಿಯಲಾದ ಅವರ ಜನವರಿ ಮತ್ತು ಫೆಬ್ರವರಿ 2013ರ ವೇತನ ಬಿಲ್ಲುಗಳನ್ನು ಸಿದ್ಧಪಡಿಸಿಕೊಡುವಂತೆ, ಅದೇ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಂ.ಎಸ್.ಸಿದ್ದೇಶ್ವರರಾವ್, ಇವರನ್ನು ಕೋರಿದ್ದರು. ಈ ಬಿಲ್ಲುಗಳನ್ನು ಸಿದ್ಧಪಡಿಸಲು ಶ್ರೀ ಎಂ.ಎಸ್. ಸಿದ್ದೇಶ್ವರರಾವ್, ದ್ವಿತೀಯ ದರ್ಜೆ ಸಹಾಯಕರು, ಇವರು ಒಟ್ಟಾರೆ ರೂ.1700/-ಗಳ ಅಕ್ರಮ ಸಂಭಾವನೆಗೆ ಒತ್ತಾಯಿಸಿರುತ್ತಾರೆ. ಈ ಪೈಕಿ ದೂರುದಾರರಾದ ಶ್ರೀ ಕೆ. ಶಾಂತಪ್ಪ, ಇವರು ರೂ.500/-ಗಳನ್ನು ಪಾವತಿಸಿದ್ದು, ಉಳಿದ ಮೊಬಲಗನ್ನು ಕೊಡಲು ಇಚ್ಛಿಸದ ದೂರುದಾರರು, ಈ ಬಗ್ಗೆ ಕರ್ನಾಟಕ ಲೋಕಾಯುಕ್ತ ಪೋಲಿಸರಿಗೆ ದಿನಾಂಕ:08-03-2013ರಂದು ದೂರನ್ನು ನೀಡಿರುತ್ತಾರೆ. ದೂರನ್ನು ದಾಖಲಿಸಿಕೊಂಡ ಲೋಕಾಯುಕ್ತ ಪೋಲಿಸರು ತನಿಖೆಯನ್ನು ಮುಂದುವರಿಸಿರುತ್ತಾರೆ.

2) ಆಪಾದಿತರಾದ ಶ್ರೀ ಎಂ.ಎಸ್. ಸಿದ್ದೇಶ್ವರರಾವ್, ದ್ವಿತೀಯ ದರ್ಜೆ ಸಹಾಯಕರು, ಜಲಾನಯನ ಅಭಿವೃದ್ಧಿ ಇಲಾಖೆ, ಹೊನ್ನಾಳಿ ಇವರು ದಿನಾಂಕ: 11-03-2013ರಂದು ದೂರುದಾರರಾದ ಶ್ರೀ ಕೆ. ಶಾಂತಪ್ಪನವರಿಂದ ರೂ.1200/-ಗಳ ಅಕ್ರಮ ಸಂಭಾವನೆಯನ್ನು ಸ್ವೀಕರಿಸುತ್ತಿದ್ದ ಸಮಯದಲ್ಲಿ ಲೋಕಾಯುಕ್ತ ಪೋಲಿಸರು ಬೀಸಿದ ಟ್ರ್ಯಾಪ್ ಬಲೆಗೆ ಸಿಲುಕಿರುತ್ತಾರೆ.

3) ತನಿಖೆಯ ಸಮಯದಲ್ಲಿ ಲಭ್ಯವಾದ ದಾಖಲೆಗಳು, ಸಾಕ್ಷಿದಾರರ ಹೇಳಿಕೆಗಳು, ವಸ್ತುಗಳು, ಪಂಚನಾಮೆ ಹಾಗೂ ಆಪಾದಿತ ಮತ್ತು ದೂರುದಾರರ ಹೇಳಿಕೆಗಳನ್ನು ಪರಿಶೀಲಿಸಿದಾಗ, ಆಪಾದಿತರಾದ ಶ್ರೀ ಎಂ.ಎಸ್. ಸಿದ್ದೇಶ್ವರರಾವ್‌ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ, ನಡತೆ ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಅವರ ವಿರುದ್ಧ ಶಿಸ್ತುಕ್ರಮವನ್ನು ಜರುಗಿಸಲು ಅನುವಾಗುವಂತೆ ಇಲಾಖಾ ವಿಚಾರಣೆಗಾಗಿ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ~~ನಿಯಮಗಳು 1957ರ ನಿಯಮ 14-~~ಎ ರಡಿ ತಮ್ಮ ಪ್ರಾಧಿಕಾರಕ್ಕೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತ-2 ಇವರು ಶಿಫಾರಸ್ಸು ಮಾಡುತ್ತಾ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರನ್ವಯ ವರದಿಯನ್ನು ಸಲ್ಲಿಸುತ್ತಾ, ಈ ವರದಿಯ ಮೇಲೆ ಕೈಗೊಂಡ ಕ್ರಮದ ಬಗ್ಗೆ ಅದೇ ನಿಯಮದ ಕಲಂ 12(4)ರನ್ವಯ ಮೂರು ತಿಂಗಳೊಳಗಾಗಿ ವರದಿ ಮಾಡುವಂತೆಯೂ ಸಹ ಸೂಚಿಸಿರುತ್ತಾರೆ.

4) ಉಪ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಇವರು ಮೇಲೆ ಓದಲಾದ ದಿನಾಂಕ 28-05-2014ರ ಪತ್ರದೊಂದಿಗೆ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸು/ವರದಿಯನ್ನು ಸರ್ಕಾರಕ್ಕೆ ಕಳುಹಿಸುತ್ತಾ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ ಕ್ರಮ ಜರುಗಿಸಿ ಕೈಗೊಂಡ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ-12(4)ರನ್ವಯ ವರದಿ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

...2

5) ಈ ಪ್ರಕರಣದಲ್ಲಿ ಆಪಾದಿತರಾದ ಶ್ರೀ ಎಂ.ಎಸ್. ಸಿದ್ದೇಶ್ವರರಾವ್, ಇವರ ಶಿಸ್ತು ಪ್ರಾಧಿಕಾರವು ಕೃಷಿ ಆಯುಕ್ತರಾಗಿದ್ದರೂ ಸಹ ಮೇಲೆ ವಿವರಿಸಿದಂತೆ ಸಿಸಿಎ ನಿಯಮದ ನಿಯಮ 14-ಎ(2)(ಇ) ರನ್ವಯ ಮಾನ್ಯ ಲೋಕಾಯುಕ್ತರ ವರದಿಯ ಮೇಲೆ ಹಾಗೂ ಅವರು ಕಳುಹಿಸಲಾದ ಇಲಾಖಾ ವಿಚಾರಣಾ ವರದಿಯ ಮೇಲೆ ಕ್ರಮ ಕೈಗೊಂಡು ದಂಡನೆಯನ್ನು ವಿಧಿಸುವ ಪ್ರಾಧಿಕಾರ ಸರ್ಕಾರವೇ ಆಗಿರುತ್ತದೆ.

6) ಆದುದರಿಂದ ಮಾನ್ಯ ಉಪ ಲೋಕಾಯುಕ್ತ-2 ರವರ ಶಿಫಾರಸ್ಸಿನಂತೆ ಶ್ರೀ ಎಂ.ಎಸ್. ಸಿದ್ದೇಶ್ವರರಾವ್, ದ್ವಿತೀಯ ದರ್ಜೆ ಸಹಾಯಕರು, ಜಲಾನಯನ ಅಭಿವೃದ್ಧಿ ಇಲಾಖೆ, ಹೊನ್ನಾಳಿ, ದಾವಣಗೆರೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಅನುವಾಗುವಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಗಳು 1957ರ ನಿಯಮ-14(ಎ) ರನ್ವಯ ಇಲಾಖಾ ವಿಚಾರಣೆಗಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ಸರ್ಕಾರವು ನಿರ್ಧರಿಸಿದೆ, ಆದುದರಿಂದ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃವಸೆ 2014, ಬೆಂಗಳೂರು, ದಿನಾಂಕ: 05-11-2014.

7) ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಂ.ಎಸ್.ಸಿದ್ದೇಶ್ವರರಾವ್, ದ್ವಿತೀಯ ದರ್ಜೆ ಸಹಾಯಕರು, ಜಲಾನಯನ ಅಭಿವೃದ್ಧಿ ಇಲಾಖೆ, ಹೊನ್ನಾಳಿ, ದಾವಣಗೆರೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಅನುವಾಗುವಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಗಳು 1957ರ ನಿಯಮ-~~14(ಎ)~~ 14-A ರನ್ವಯ ಇಲಾಖಾ ವಿಚಾರಣೆಗಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಆರ್. ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಸೇವೆಗಳು & ಸಮನ್ವಯ)

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2) ~~ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.~~
3) ಉಪ ನಿಬಂಧಕರು, ವಿಚಾರಣೆಗಳು-1, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.
4) ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು.
5) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು-09.
6) ಜಂಟಿ ಕೃಷಿ ನಿರ್ದೇಶಕರು, ದಾವಣಗೆರೆ ಜಿಲ್ಲೆ, ದಾವಣಗೆರೆ.
7) ಸಹಾಯಕ ಕೃಷಿ ನಿರ್ದೇಶಕರು, ಹೊಳಲ್ಕರೆ, ಚಿತ್ರದುರ್ಗ ಜಿಲ್ಲೆ.
8) ಶ್ರೀ ಎಂ.ಎಸ್. ಸಿದ್ದೇಶ್ವರರಾವ್, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹೊಳಲ್ಕರೆ, ಚಿತ್ರದುರ್ಗ ಜಿಲ್ಲೆ.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಹೊರಡಿಸಿದೆ
ದಿನಾಂಕ: 6 ...